<u>ಸಮಾಜ ಕಲ್ಯಾಣ ಇಲಾಖೆ</u>

<u>ಪರೀಕ್ಷಾ ಪೂರ್ವ ತರಬೇತಿ ಕೇಂದ್ರ (ಪಿ.ಇ.ಟಿ.ಸಿ), ಬೆಂಗಳೂರು.</u>

**<u>ಮಾಹಿತಿ ಹಕ್ಕು ಕಾಯಿದೆ-ಸೆಕ್ಷನ್ 4 (1) ಬಿ ಸಾರ್ವಜನಿಕ ಪ್ರಾಧಿಕಾರಗಳ ಜವಾಬ್ದಾರಿ</u>**

***(i)*** **ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು:-**

ಸಮಾಜ ಕಲ್ಯಾಣ ಇಲಾಖೆಯ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ಕೇಂದ್ರ ಲೋಕ ಸೇವಾ ಆಯೋಗ / ಕರ್ನಾಟಕ ಲೋಕ ಸೇವಾ ಆಯೋಗ / ಬ್ಯಾಂಕಿಂಗ್ / ಗ್ರೂಪ್ 'ಸಿ' ಮತ್ತು ಎಸ್.ಎಸ್.ಸಿ ಹುದ್ದೆಗಳಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 3 ತಿಂಗಳಿಂದ 9 ತಿಂಗಳವರೆಗೆ ಪೂರ್ವಭಾವಿ ತರಬೇತಿಗಾಗಿ ದೆಹಲಿ, ಹೈದರಾಬಾದ್ ಹಾಗೂ ಕರ್ನಾಟಕದಲ್ಲಿನ ತರಬೇತಿ ಸಂಸ್ಥೆಗಳಿಗೆ ನಿಯೋಜಿಸಿ ಸದರಿ ತರಬೇತಿಗೆ ತಗಲುವ ಸಂಪೂರ್ಣ ವೆಚ್ಚವನ್ನು ಇಲಾಖಾವತಿಯಿಂದ ಭರಿಸುವುದರ ಜೊತೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾಸಿಕ ಶಿಷ್ಯವೇತನವನ್ನು ನೀಡಲಾಗುತ್ತಿದೆ. ಇದರ ಜೊತೆಗೆ ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ಸಲುವಾಗಿ ನಡೆಯುವ JEE, NEET, CET ಮೊದಲಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರ್ವಭಾವಿ ತರಬೇತಿ ಸಹ ನೀಡಲಾಗುತ್ತಿದೆ.

ಮುಂದುವರೆದು, ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರ್ವಭಾವಿ ತರಬೇತಿ ನೀಡುವದರ ಜೊತೆಗೆ ಪ್ರಬುದ್ಧ ಯೋಜನೆಯಡಿ ವಿದೇಶಿ ವಿಶ್ವ ವಿದ್ಯಾಲಯದಲ್ಲಿ ಉನ್ನತ ವ್ಯಾಸಂಗಕ್ಕೆ ಸಹಾಯಧನ ನೀಡುವ ಕಾರ್ಯಕ್ರಮವನ್ನು ಸಹ ಅನುಷ್ಠಾನಗೊಳಿಸಲಾಗುತ್ತಿದ್ದು, ಕಾರ್ಯಕ್ರಮಗಳ ಕುರಿತು ಉಸ್ತುವಾರಿಗಾಗಿ ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಸಚಿವರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಉನ್ನತ ಸಮಿತಿಯನ್ನು ರಚಿಸಲಾಗಿದೆ.

ಡಾ:ಬಿ.ಆರ್.ಅಂಬೇಡ್ಕರ್ ಭವನದ ಆವರಣದಲ್ಲಿ ಅಂಬೇಡ್ಕರ್ ಮೆಮೋರಿಯಲ್ ಟ್ರಸ್ಟ್ ವತಿಯಿಂದ ನಡೆಯುತ್ತಿರುವ ವಾಚನಾಲಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಬೇಕಾಗುವ ಎಲ್ಲಾ ಸ್ಟಡಿ ಮೆಟೀರಿಯಲ್ಸ್, ಪುಸ್ತಕಗಳು, ಜರ್ನಲ್ಸ್‌ಗಳು ಲಭ್ಯವಿದ್ದು, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವ ಅಭ್ಯರ್ಥಿಗಳಿಗೆ ಉತ್ತಮ ಅವಕಾಶ ಕಲ್ಪಿಸಲಾಗಿದೆ.

**ತರಬೇತಿ ಕಾರ್ಯಕ್ರಮಗಳು ಮತ್ತು ಶೈಕ್ಷಣಿಕ ಅರ್ಹತೆ:-**

| ಕ್ರ.ಸಂ. | ವಿಷಯ | ವಿವರ | ಶೈಕ್ಷಣಿಕ ಅರ್ಹತೆ |
|---|---|---|---|
| 01. | UPSC | ಕೇಂದ್ರ ಲೋಕಸೇವಾ ಆಯೋಗ ಪ್ರತಿ ವರ್ಷ IAS, IFS, IPS, IRS ಮೊದಲಾದ 23 ವಿವಿಧ ಸೇವೆಗಳ ಆಯ್ಕೆಗೆ ಮೇ-ಜೂನ್ ಮಾಹೆಯಲ್ಲಿ ಪೂರ್ವಭಾವಿ ಪರೀಕ್ಷೆಗೆ ಅರ್ಜಿಯನ್ನು ಆಹ್ವಾನಿಸಲಾಗುತ್ತಿದ್ದು, ಇವುಗಳಿಗೆ ತರಬೇತಿ ನೀಡುವುದು | ಪದವಿಯಲ್ಲಿ ಶೇ.55 ಕ್ಕಿಂತ ಹೆಚ್ಚು ಅಂಕಗಳಿಸಿದ ಎಲ್ಲಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. |
| 02. | KAS | ಕರ್ನಾಟಕ ಲೋಕ ಸೇವಾ ಆಯೋಗ ಕಾಲಕಾಲಕ್ಕೆ ಗೆಜೆಟೆಡ್ ಪ್ರೊಬೇಷನರಿ ಆಫೀಸರ್‌ಗಳ ಆಯ್ಕೆಗೆ ಅರ್ಜಿ ಆಹ್ವಾನಿಸಲಿದ್ದು, ಅದಕ್ಕೆ ಅಗತ್ಯ ತರಬೇತಿ ನೀಡುವುದು. | ಭಾರತದ ಯಾವುದೇ ಅಂಗೀಕೃತ ವಿಶ್ವ ವಿದ್ಯಾಲಯದಿಂದ ಪದವಿ ಪಡೆದವರು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. ಅರ್ಜಿ ಸಲ್ಲಿಸಲು ಕನಿಷ್ಠ ಶೇ.50%ರಷ್ಟು ಅಂಕ ಗಳಿಸಿರಬೇಕು. |
| 03. | RRB | ರೈಲ್ವೆ ನೇಮಕಾತಿ ಮಂಡಳಿ, ಪ್ರತಿ ವರ್ಷ Assistant loco Pilot, Technician, Helper ಮೊದಲಾದ Matriculation ಅರ್ಹತೆ ಹೊಂದಿದ 1ನೇ ಹಂತದ ಹುದ್ದೆಗಳಿಗೆ ಜೂನಿಯರ್ ಕ್ಲರ್ಕ್, ಅಕೌಂಟ್ಸ್ ಕ್ಲರ್ಕ್ ಕಂ ಟೈಪಿಸ್ಟ್, ಜೂನಿಯರ್ ಟೈಮ್ ಕೀಪರ್, ಟ್ರೈನ್ ಕ್ಲರ್ಕ್ ಮೊದಲಾದ 12 ನೇ ತತ್ಸಮಾನ ವಿದ್ಯಾರ್ಹತೆ ಹೊಂದಿದ 2 ನೇ ಹಂತದ ಹುದ್ದೆಗಳಿಗೆ, ರೈಲ್ವೆ ಪೊಲೀಸ್ ಮತ್ತು ಉಪ ನಿರೀಕ್ಷಕರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಿದ್ದು, ಇವುಗಳಿಗೆ ಅಗತ್ಯ ತರಬೇತಿ ನೀಡುವುದು. | ಪದವಿಯಲ್ಲಿ ಶೇ. 50 ಕ್ಕಿಂತ ಹೆಚ್ಚು ಅಂಕಗಳಿಸಿದ ಎಲ್ಲಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. ರೈಲ್ವೆ ನೇಮಕಾತಿ ಮಂಡಳಿಯವರು ನಡೆಸುವ ಎಲ್ಲಾ ಹಂತದ ಹುದ್ದೆಗೆ ಅರ್ಜಿ ಸಲ್ಲಿಸುವವರು ಅರ್ಜಿ ಸಲ್ಲಿಸಬಹುದು. ಆದರೆ ಪದವಿ ಯಲ್ಲಿ ಶೇ.50 ಕ್ಕಿಂತ ಹೆಚ್ಚು ಅಂಕ ಪಡೆದು ಉತ್ತೀರ್ಣರಾಗಿರಬೇಕು. |
| 04. | IBPS | Institute of Banking Personnel selection ವತಿಯಿಂದ ಪ್ರತಿ ವರ್ಷ Probationary Officer / Management Trainee, Specialist Officer, Regional | ಪದವಿಯಲ್ಲಿ ಶೇ.50 ಕ್ಕಿಂತ ಹೆಚ್ಚು ಅಂಕಗಳಿಸಿದ ಎಲ್ಲಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. |

| | | | |
|---|---|---|---|
| | | Rural Bank's Group- A-B Officers ಮತ್ತು Clerks ಮೊದಲಾದ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಿದ್ದು, ಇವುಗಳಿಗೆ ಅಗತ್ಯ ತರಬೇತಿ ನೀಡುವುದು. | |
| 05. | SSC | Staff Selection Commission ವತಿಯಿಂದ 10 ನೇ ತರಗತಿ/ತತ್ಸಮಾನ ವಿದ್ಯಾರ್ಹತೆಯ ಹುದ್ದೆಗಳು, ದ್ವಿತೀಯ ಪಿಯುಸಿ/ ತತ್ಸಮಾನ ವಿದ್ಯಾರ್ಹತೆಯ ಹುದ್ದೆಗಳು, Graduation and above level's ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಿದ್ದು, ಇವುಗಳಿಗೆ ಅಗತ್ಯ ತರಬೇತಿ ನೀಡುವುದು. | Staff Selection Commission ವತಿಯಿಂದ 10ನೇ ತರಗತಿ/ ತತ್ಸಾಮಾನ ವಿದ್ಯಾರ್ಹತೆ, ದ್ವಿತೀಯ ಪಿ.ಯು.ಸಿ/ ತತ್ಸಮಾನ ವಿದ್ಯಾರ್ಹತೆ, ಪದವಿ/ ತತ್ಸಮಾನ ವಿದ್ಯಾರ್ಹತೆಗಳಿರುವ ಹುದ್ದೆ ಗಳಿಗೆ ಆಯ್ಕೆ ಬಯಸುವವರು ಅರ್ಜಿ ಸಲ್ಲಿಸಬಹುದು. ಆದರೆ ಕಡ್ಡಾಯವಾಗಿ ಪದವಿಯಲ್ಲಿ ಶೇ. 50ಕ್ಕಿಂತ ಹೆಚ್ಚು ಅಂಕಗಳಿಸಿರಬೇಕು. |
| 06. | ಗ್ರೂಪ್ ಸಿ | ಕರ್ನಾಟಕ ಲೋಕ ಸೇವಾ ಆಯೋಗ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಪೋಲೀಸ್ ನೇಮಕಾತಿ ಪ್ರಾಧಿಕಾರ, ಕರ್ನಾಟಕ ನ್ಯಾಯಾಂಗ ನೇಮಕಾತಿ ಪ್ರಾಧಿಕಾರ, ಯು.ಪಿ.ಎಸ್.ಸಿ ಮೊದಲಾದ ಏಜೆನ್ಸಿಗಳು ವಿವಿಧ ಗ್ರೂಪ್ ಎ, ಬಿ & ಸಿ ದರ್ಜೆಯ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಿದ್ದು, ಇವುಗಳಿಗೆ ಅಗತ್ಯ ತರಬೇತಿ ನೀಡುವುದು. | KPSC, KEA ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ, ಕರ್ನಾಟಕ ನ್ಯಾಯಾಂಗ ಇಲಾಖೆ ಮೊದಲಾದ ಪರೀಕ್ಷಾ ಮಂಡಳಿ/ಆಯೋಗಗಳು, PDO, FDA, SDA, SUB-INSPECTOR, GUARD, FIRE SUB-INSPECTOR, FOREST RANGER, WARDEN JAILER ಮೊದಲಾದ ಗ್ರೂಪ್-ಸಿ ದರ್ಜೆಯ ಹುದ್ದೆಗಳಿಗೆ ನಿಗದಿಪಡಿಸಿದ ಶೈಕ್ಷಣಿಕ ಅರ್ಹತೆಯಲ್ಲಿ ಕನಿಷ್ಠ 50% ಕ್ಕಿಂತ ಹೆಚ್ಚು ಅಂಕಗಳಿಸಿರಬೇಕು. |

**ಇತರೆ ಅರ್ಹತೆಗಳು:-**

1. ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
2. ಕರ್ನಾಟಕ ರಾಜ್ಯದ ಅನುಸೂಚಿತ ಜಾತಿ ಮತ್ತು ಅನುಸೂಚಿತ ವರ್ಗಕ್ಕೆ ಸೇರಿದ ಜಾತಿ ಪಟ್ಟಿಯಲ್ಲಿ ಸೇರಿರತಕ್ಕದ್ದು.
3. ಕುಟುಂಬದ ವಾರ್ಷಿಕ ಆದಾಯ ರೂ. 5.00 ಲಕ್ಷಗಳು ಮೀರಿರಬಾರದು.
4. ಅಭ್ಯರ್ಥಿಯು ವಯಸ್ಸು ಕನಿಷ್ಠ 18 ರಿಂದ 40 ವರ್ಷದೊಳಗಿರತಕ್ಕದ್ದು.
5. ಒಬ್ಬ ಅಭ್ಯರ್ಥಿ ಒಂದು ಬಾರಿ ಯು.ಪಿ.ಎಸ್.ಸಿ / ಕೆ.ಎ.ಎಸ್ ಪರೀಕ್ಷೆಗಳಿಗೆ ಪೂರ್ವಭಾವಿ ತರಬೇತಿ ಪಡೆದರೆ ನಂತರ ಇಲಾಖಾವತಿಯಿಂದ ಯಾವುದೇ ಪರೀಕ್ಷೆಗಳಿಗೆ ತರಬೇತಿ ಪಡೆಯಲು ಅರ್ಹರಿರುವುದಿಲ್ಲ.
6. ಒಬ್ಬ ಅಭ್ಯರ್ಥಿ 03 ತಿಂಗಳ Group-C / Banking / RRB / SSC ಪರೀಕ್ಷೇಗಳಿಗೆ ತರಬೇತಿ ಪಡೆದಿದ್ದಲ್ಲಿ ಅಂತಹ ಅಭ್ಯರ್ಥಿಗಳು ಒಂದು ಬಾರಿ ಯು.ಪಿ.ಎಸ್.ಸಿ / ಕೆ.ಎ.ಎಸ್ ಪರೀಕ್ಷೆಗಳಿಗೆ ಪೂರ್ವಭಾವಿ ತರಬೇತಿ ಪಡೆಯಲು ಅರ್ಹರಿರುತ್ತಾರೆ.

**ಮೀಸಲಾತಿ:-**

| | | |
|---|---|---|
| 1. ವಿಶೇಷಚೇತನ (ಅಂಗವಿಕಲ) ಅಭ್ಯರ್ಥಿ | – | 04% |
| 2. ಹಾಸ್ಟಲ್ ವಿದ್ಯಾರ್ಥಿಗಳಿಗೆ | – | 10% |
| 3. ವಸತಿ ಶಾಲೆ ವಿದ್ಯಾರ್ಥಿಗಳಿಗೆ | – | 10% |
| 4. ಮಹಿಳಾ ಅಭ್ಯರ್ಥಿಗಳಿಗೆ | – | 33% |
| 5. ಅಲೆಮಾರಿ ಸಮುದಾಯ / ಸಫಾಯಿ ಕರ್ಮಚಾರಿಗಳ ಮಕ್ಕಳು | – | 05% |

- ಹಾಸ್ಟೆಲ್ ಮೀಸಲಾತಿ ಕೋರುವ ವಿದ್ಯಾರ್ಥಿಗಳು ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ನಿರ್ದೇಶನಾಲಯ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಗಳ ಅಧೀನದಲ್ಲಿರುವ ಹಾಸ್ಟೆಲ್‌ಗಳಲ್ಲಿ ಕನಿಷ್ಠ 03 ವರ್ಷ ನಿಲಯಾರ್ಥಿಗಳಾಗಿರಬೇಕು.
- ವಸತಿ ಶಾಲೆ ಮೀಸಲಾತಿ ಕೋರುವ ವಿದ್ಯಾರ್ಥಿಗಳು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ಮತ್ತು ಅಲ್ಪ ಸಂಖ್ಯಾತರ ಇಲಾಖೆ ಅಧೀನದಲ್ಲಿರುವ ಮೊರಾರ್ಜಿ ದೇಸಾಯಿ / ಕಿತ್ತೂರು ರಾಣಿ ಚೆನ್ನಮ್ಮ / ಅಂಬೇಡ್ಕರ್ ವಸತಿ ಶಾಲೆಗಳಲ್ಲಿ ಕನಿಷ್ಠ 05 ವರ್ಷಗಳ ವಿದ್ಯಾಭ್ಯಾಸ ಮಾಡಿರತಕ್ಕದ್ದು.
- ಮೇಲ್ಕಂಡ ಮೀಸಲಾತಿಗಳಲ್ಲಿ ನಿಗಧಿತ ಸಂಖ್ಯೆಯ ಅಭ್ಯರ್ಥಿಗಳು ಲಭ್ಯರಿಲ್ಲದೇ ಇದ್ದಲ್ಲಿ ಇತರೆ ಪ.ಜಾ ಮತ್ತು ಪ.ಪಂ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಲಾಗುವುದು.

**ಅರ್ಜಿ ಆಹ್ವಾನ:–**

- ಪ್ರತಿ ವರ್ಷ ಮಾರ್ಚ್ ನಿಂದ ಏಪ್ರಿಲ್ ಮಾಹೆಯಲ್ಲಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗುವುದು.

**ಸಾಮಾನ್ಯ ಪ್ರವೇಶ ಪರೀಕ್ಷೆ:–**

- ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಜುಲೈ / ಆಗಸ್ಟ್ ಮಾಹೆಯಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ / ಕೇಂದ್ರೀಯ ದಾಖಲಾತಿ ಘಟಕ ಅಥವಾ ಇತರೆ ಪ್ರಾಧಿಕಾರದ ಮೂಲಕ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಲಾಗುವುದು.

**ಅಭ್ಯರ್ಥಿಗಳ ಆಯ್ಕೆ:–**

- ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳ ಮೆರಿಟ್ ಆಧಾರದ ಮೇಲೆ ಅಭ್ಯರ್ಥಿಗಳನ್ನು ಕೌನ್ಸಿಲಿಂಗ್ ಮೂಲಕ ಆಯ್ಕೆ ಮಾಡಲಾಗುವುದು.
- ಕೌನ್ಸಲಿಂಗ್‌ನಲ್ಲಿ ಅಭ್ಯರ್ಥಿಗಳು ತಮ್ಮ ಇಚ್ಚೆಯಂತೆ ಯಾವುದಾದರೂ ತರಬೇತಿ ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳಬಹುದು.
- ಭೌತಿಕ ಗುರಿಗೆ ಅನುಗುಣವಾಗಿ ತರಬೇತಿ ನೀಡಲು ಆಯ್ಕೆಯಾಗುವ ತರಬೇತಿ ಸಂಸ್ಥೆಗಳಿಗೆ ಗುರಿ ನಿಗಧಿಪಡಿಸಲಾಗುವುದು.

**ತರಬೇತಿ ಅವಧಿ:–**

- ಯು.ಪಿ.ಎಸ್.ಸಿ – 09 ತಿಂಗಳುಗಳು / 230 ದಿನಗಳು / 1300 ಗಂಟೆಗಳು.
- ಕೆ.ಎ.ಎಸ್ – 07 ತಿಂಗಳುಗಳು / 180 ದಿನಗಳು / 1080 ಗಂಟೆಗಳು.
- ಬ್ಯಾಂಕಿಂಗ್ – 03 ತಿಂಗಳುಗಳು / 75 ದಿನಗಳು / 450 ಗಂಟೆಗಳು.
- ಎಸ್.ಎಸ್.ಸಿ – 03 ತಿಂಗಳುಗಳು / 75 ದಿನಗಳು / 450 ಗಂಟೆಗಳು.
- ಆರ.ಆರ್.ಬಿ – 03 ತಿಂಗಳುಗಳು / 75 ದಿನಗಳು / 450 ಗಂಟೆಗಳು.
- ಗ್ರೂಪ್ ಸಿ – 03 ತಿಂಗಳುಗಳು / 75 ದಿನಗಳು / 450 ಗಂಟೆಗಳು.

**ಶಿಷ್ಯವೇತನ ಮತ್ತು ಪ್ರಯಾಣ ಭತ್ಯೆ:–**

1. **ಯು.ಪಿ.ಎಸ್.ಸಿ** – ದೆಹಲಿ ರೂ. 10,000/– ಮಾಹೆಯಾನ ಪ್ರಯಾಣ ಭತ್ಯೆ ರೂ. 2,000/–

– ಹೈದರಾಬಾದ್ ರೂ. 8,000/– ಪ್ರಯಾಣ ಭತ್ಯೆ ರೂ. 1,000/–

– ಬೆಂಗಳೂರು ರೂ. 6,000/– ಪ್ರಯಾಣ ಭತ್ಯೆ ರೂ. 1,000/–

– ಇತರೆ ಸ್ಥಳಗಳು ರೂ. 5,000/–

2. **ಕೆ.ಎ.ಎಸ್ / ಬ್ಯಾಂಕಿಂಗ್**
   **ಗ್ರೂಪ್–ಸಿ / ಎಸ್.ಎಸ್.ಸಿ** – ಹೊರ ಜಿಲ್ಲೆಯ ಅಭ್ಯರ್ಥಿಗಳಿಗೆ ರೂ. 5,000/–
   **ಆರ್.ಆರ್.ಬಿ** ಸ್ಥಳೀಯ ಅಭ್ಯರ್ಥಿಗಳಿಗೆ ರೂ. 4,000/–

**"ಪ್ರಬುದ್ಧ" ಯೋಜನೆಯಡಿ ವಿದೇಶಿ ವಿಶ್ವ ವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಧನ ಸಹಾಯ:–**

ವಿದೇಶಿ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗಕ್ಕೆ ಧನಸಹಾಯ ಒದಗಿಸುವ ಕಾರ್ಯಕ್ರಮವನ್ನು 2001–02 ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಸದರಿ ಕಾರ್ಯಕ್ರಮವನ್ನು ಮಾರ್ಪಡಿಸಿ ಪರಿಷ್ಕೃತ ಮಾರ್ಗಸೂಚಿಗಳನ್ನು ಅಳವಡಿಸಿ "ಪ್ರಬುದ್ಧ" ಎಂಬ ನೂತನ ಹೆಸರಿನೊಂದಿಗೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಸಂಬಂಧ ದಿನಾಂಕ:07.12.2018 ರಂದು "ಪ್ರಬುದ್ಧ" ಯೋಜನೆಯನ್ನು ಅನಾವರಣಗೊಳಿಸಲಾಗಿದೆ.

ಈ ಯೋಜನೆಯಡಿ ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಇಂಜಿನಿಯರಿಂಗ್, ಮ್ಯಾನೇಜ್‌ಮೆಂಟ್, ವಿಜ್ಞಾನ, ಕೃಷಿ ಹಾಗೂ ಸಂಬಂಧಿತ ವಿಷಯಗಳು ಮತ್ತು ವೈದ್ಯಕೀಯ ವಿಷಯಗಳಲ್ಲಿ ಸ್ನಾತಕೋತ್ತರ ಹಾಗೂ ಪಿ.ಹೆಚ್.ಡಿ. ಅಧ್ಯಯನ ಕೈಗೊಳ್ಳುವ ಪ.ಜಾತಿ ಅಭ್ಯರ್ಥಿಗಳಿಗೆ ಧನಸಹಾಯವನ್ನು ನೀಡಲಾಗುತ್ತಿದೆ.

ಈ ಯೋಜನೆಯಡಿ ಧನಸಹಾಯವನ್ನು ಪಡೆಯಲು ಅಭ್ಯರ್ಥಿಗಳು ಈ ಕೆಳಗಿನ ಅರ್ಹತೆಯನ್ನು ಹೊಂದಿರಬೇಕಾಗುತ್ತದೆ.

**(ಕನಿಷ್ಟ ವಿದ್ಯಾರ್ಹತೆ)**

ಎ)ಪಿ.ಹೆಚ್.ಡಿ : ಸ್ನಾತಕೋತ್ತರ ಅಥವಾ ತತ್ಸಮಾನ ಪದವಿಯಲ್ಲಿ 55% ರಷ್ಟು ಅಂಕಗಳನ್ನು ಪಡೆದಿರಬೇಕು.

ಬಿ)ಸ್ನಾತಕೋತ್ತರ ಪದವಿ (P.G.): ಪದವಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ 55% ರಷ್ಟು ಅಂಕಗಳನ್ನು ಪಡೆದಿರಬೇಕು.

ಸಿ)ಪಿ.ಹೆಚ್.ಡಿ./ಸ್ನಾತಕೋತ್ತರ ಕೋರ್ಸುಗಳಿಗೆ ಹೆಚ್ಚುವರಿ ವಿದ್ಯಾರ್ಹತೆ:

ಈ ಯೋಜನೆಯಡಿ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸುವವರು ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಈ ಕೆಳಗೆ ನೀಡಿರುವ ವಿವರಗಳಂತೆ ಕನಿಷ್ಠ ಅಂಕಗಳನ್ನು GRE/GMAT/TOEFL/IELTS ಪರೀಕ್ಷೆಗಳಲ್ಲಿ ಪಡೆದು ಉತ್ತೀರ್ಣರಾಗಿರತಕ್ಕದ್ದು:–

**ಎ)ಯು.ಎಸ್.ಎ:**

ಇಂಜಿನಿಯರಿಂಗ್ ಮತ್ತು ಇನ್ನಿತರ ಕೋರ್ಸುಗಳು:– GRE – 340 ಅಂಕಗಳಿಗೆ ಕನಿಷ್ಠ 295 ಅಂಕಗಳನ್ನು ಮತ್ತು TOEFL –120 ಅಂಕಗಳಿಗೆ ಕನಿಷ್ಠ 80 ಅಂಕಗಳನ್ನು ಪಡೆದಿರಬೇಕು.

ನಿರ್ವಹಣೆ (ಮ್ಯಾನೇಜ್ ಮೆಂಟ್): GMAT – 800 ಅಂಕಗಳಿಗೆ ಕನಿಷ್ಠ 400 ಅಂಕಗಳನ್ನು ಮತ್ತು TOEFL – 120 ಅಂಕಗಳಿಗೆ ಕನಿಷ್ಠ 80 ಅಂಕಗಳನ್ನು ಪಡೆದಿರಬೇಕು.

**ಬಿ) ಇನ್ನಿತರ ದೇಶಗಳು:**

ಇಂಜಿನಿಯರಿಂಗ್ ಮತ್ತು ಇನ್ನಿತರ ಕೋರ್ಸುಗಳು:– GRE – 340 ಅಂಕಗಳಿಗೆ ಕನಿಷ್ಠ 295 ಅಂಕಗಳನ್ನು, IELTS - 09 ಅಂಕಗಳಿಗೆ 06 ಅಂಕಗಳನ್ನು ಮತ್ತು TOEFL – 120 ಅಂಕಗಳಿಗೆ ಕನಿಷ್ಠ 80 ಅಂಕಗಳನ್ನು ಪಡೆದಿರಬೇಕು.

ನಿರ್ವಹಣೆ (ಮ್ಯಾನೇಜ್ ಮೆಂಟ್): GMAT – 800 ಅಂಕಗಳಿಗೆ ಕನಿಷ್ಠ 400 ಅಂಕಗಳನ್ನು ಮತ್ತು IELTS – 09 ಅಂಕಗಳಿಗೆ 06 ಅಂಕಗಳನ್ನು ಅಥವಾ TOEFL – 120 ಅಂಕಗಳಿಗೆ ಕನಿಷ್ಠ 80 ಅಂಕಗಳನ್ನು ಪಡೆದಿರಬೇಕು.

**ಸ್ಥಾನ ಹಂಚಿಕೆ:**

| **ಕ್ರ.ಸಂ.** | **ವರ್ಗ** | **ಸ್ಥಾನ ಹಂಚಿಕೆ ಶೇಕಡಾವಾರು** | **ಷರಾ** |
|---|---|---|---|
| 1 | ಮಹಿಳಾ ಅಭ್ಯರ್ಥಿ | 33% | ನಿಗದಿತ ಗುರಿಗನುಗುಣವಾಗಿ ಅರ್ಹ ಮಹಿಳಾ ಅಭ್ಯರ್ಥಿ ಆಯ್ಕೆಗೆ ಲಭ್ಯವಿಲ್ಲದಿದ್ದರೆ, ಅಂತಹ ಸ್ಥಾನವನ್ನು ಪುರುಷ ಅಭ್ಯರ್ಥಿಗಳಿಂದ ಭರ್ತಿ ಮಾಡುವುದು. |
| 2 | ಅಂಗವಿಕಲ ವಿದ್ಯಾರ್ಥಿ | 05% | ನಿಗದಿತ ಗುರಿಗನುಗುಣವಾಗಿ ಅರ್ಹ ಅಂಗವಿಕಲ ಅಭ್ಯರ್ಥಿ ಆಯ್ಕೆಗೆ ಲಭ್ಯವಿಲ್ಲದಿದ್ದರೆ, ಅಂತಹ ಸ್ಥಾನವನ್ನು ಆಯಾ ವರ್ಗದ ಸಾಮಾನ್ಯ ಅಭ್ಯರ್ಥಿಗಳಿಂದ ಭರ್ತಿ ಮಾಡುವುದು. |
| 3 | ಹಾಸ್ಟಲ್ ವಿದ್ಯಾರ್ಥಿ | 10% | ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ನಡೆಸಲ್ಪಡುವ ಸರ್ಕಾರಿ ವಿದ್ಯಾರ್ಥಿ ನಿಲಯದಲ್ಲಿ ಕನಿಷ್ಠ 03 ವರ್ಷ ಅಧ್ಯಯನ ಮಾಡಿರಬೇಕು,<br>ನಿಗದಿತ ಸಂಖ್ಯೆಯ ಹಾಸ್ಟಲ್ ವಿದ್ಯಾರ್ಥಿಗಳು ಆಯ್ಕೆಗೆ ಲಭ್ಯವಿಲ್ಲದಿದ್ದರೆ, ಅಂತಹ ಸ್ಥಾನಗಳಿಗೆ ಕರ್ನಾಟಕ ವಸತಿ |

| | | | |
|---|---|---|---|
| | | | ಶಿಕ್ಷಣ ಸಂಸ್ಥೆಯ ವಸತಿ ಶಾಲೆಯಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗೆ ಅವಕಾಶ ಕಲ್ಪಿಸಲಾಗುವುದು. |
| 4 | ವಸತಿ ಶಾಲೆ | 10% | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆ/ ಕಾಲೇಜುಗಳಲ್ಲಿ ಕನಿಷ್ಠ 03 ವರ್ಷಗಳ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ ಶೇ10 ರಷ್ಟು ಸ್ಥಾನವನ್ನು ಹಂಚಿಕೆ ಮಾಡುವುದು.<br>ನಿಗದಿತ ಸಂಖ್ಯೆಯ ಅರ್ಹ ವಸತಿ ಶಾಲೆಯ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ, ಸರ್ಕಾರಿ ವಿದ್ಯಾರ್ಥಿ ನಿಲಯದಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗುವುದು.<br>ಅವರು ಲಭ್ಯವಿಲ್ಲದಿದ್ದರೆ ಇತರೆ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಲಾಗುವುದು. |
| 5 | ಸಫಾಯಿ ಕರ್ಮಚಾರಿ ಮಕ್ಕಳು/ಸೂಕ್ಷ್ಮ ಅತಿ ಸೂಕ್ಷ್ಮ ವರ್ಗದ ವಿದ್ಯಾರ್ಥಿಗಳು | 5% | ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ ಇತರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗೆ ಅವಕಾಶ ಕಲ್ಪಿಸಲಾಗುವುದು. |

**ಸಹಾಯಧನ:–**

| **ಕ್ರ.ಸಂ.** | **ವಾರ್ಷಿಕ ಆದಾಯ** | **ಸಹಾಯಧನ** |
|---|---|---|
| 1 | 8.00 ಲಕ್ಷದ ವರೆಗಿನ ಕುಟುಂಬದ ವಾರ್ಷಿಕ ಆದಾಯ ಹೊಂದಿರುವ ಅಭ್ಯರ್ಥಿಗಳಿಗೆ. | ವಿಶ್ವವಿದ್ಯಾನಿಲಯದ ಕೋರ್ಸ್ ಶುಲ್ಕ – ಶೇ 100<br>ನಿರ್ವಹಣಾ ವೆಚ್ಚ ಗರಿಷ್ಠ – 8.ಲಕ್ಷಗಳು<br>(ನಿರ್ವಾಹಣ ವೆಚ್ಚದ ಶೇ.75 ಅಥವಾ 8.00 ಲಕ್ಷಗಳು ಎರಡರಲ್ಲಿ ಯಾವುದು ಕಡಿಮೆಯೋ ಅದನ್ನು ಪಾವತಿಸಲಾಗುವುದು)<br>ವೀಸಾ ಶುಲ್ಕ (ವಾಸ್ತವಿಕ) – ಶೇ 100<br>ವಿಮಾ ಶುಲ್ಕ (ವಾಸ್ತವಿಕ) – ಶೇ 100<br>ಪುಸ್ತಕ ಮತ್ತು ಇತರೆ ಶುಲ್ಕ – 1 ಲಕ್ಷ<br>ವಿಮಾನ ಪ್ರಯಾಣ ವೆಚ್ಚ – ಶೇ.100<br>(ಕೋರ್ಸ್ ಪೂರ್ಣಾವಧಿಯಲ್ಲಿ ಒಂದು ಬಾರಿ ಮಾತ್ರ ಏಕನಾಮಿಕ್ ಕ್ಲಾಸ್ ನಲ್ಲಿ ವಿದೇಶದಲ್ಲಿ ವ್ಯಾಸಂಗಕ್ಕೆ |

| | | |
|---|---|---|
| | | ಪ್ರಯಾಣಿಸಲು ಮತ್ತು ವಿದೇಶದಿಂದ ಒಂದು ಬಾರಿ ಸ್ವದೇಶಕ್ಕೆ ಪ್ರಯಾಣಿಸಲು ಅವಕಾಶವಿರುತ್ತದೆ.) |
| | 8.00 ಲಕ್ಷದಿಂದ 15.00 ಲಕ್ಷದ ವರೆಗಿನ ಕುಟುಂಬದ ವಾರ್ಷಿಕ ಆದಾಯ ಹೊಂದಿರುವ ಅಭ್ಯರ್ಥಿಗಳಿಗೆ. | ಈ ಮೇಲ್ಕಂಡ ಎಲ್ಲಾ ವೆಚ್ಚದಲ್ಲಿ ಶೇ. 50 ರಷ್ಟು ವೆಚ್ಚವನ್ನು ಪಾವತಿಸುವುದು |
| | 15.00 ಲಕ್ಷದಿಂದ 25.00 ಲಕ್ಷದ ವರೆಗಿನ ಕುಟುಂಬದ ವಾರ್ಷಿಕ ಆದಾಯ ಹೊಂದಿರುವ ಅಭ್ಯರ್ಥಿಗಳಿಗೆ. | ಈ ಮೇಲ್ಕಂಡ ಎಲ್ಲಾ ವೆಚ್ಚದಲ್ಲಿ ಶೇ. 33 ರಷ್ಟು ವೆಚ್ಚವನ್ನು ಪಾವತಿಸುವುದು |

**ಸೂಚನೆ:** ನಿರ್ವಾಹಣಾ ವೆಚ್ಚವನ್ನು ಪಾವತಿಸುವಾಗ ವಿಶ್ವ ವಿದ್ಯಾಲಯಗಳ ಕನಿಷ್ಠ ನಿರ್ವಾಹಣಾ ವೆಚ್ಚ/ ಅಂದಾಜು ನಿರ್ವಾಹಣ ವೆಚ್ಚದ ಶೇ.75 ಅಥವಾ 8.00 ಲಕ್ಷಗಳು ಎರಡರಲ್ಲಿ ಯಾವುದು ಕಡಿಮೆಯೋ ಅದನ್ನು ಪಾವತಿಸುವುದು.

**ವಯೋಮಿತಿ:**

ಸ್ನಾತಕೋತ್ತರ ಪದವಿ / ಪಿ.ಎಚ್.ಡಿ ಯ ಉನ್ನತ ವಾಸಂಗಕ್ಕೆ ಆಯ್ಕೆ ಬಯಸುವ ಅಭ್ಯರ್ಥಿಯು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ 35 ವರ್ಷವನ್ನು ಮೀರಬಾರದು.

**ವಾರ್ಷಿಕ ಗುರಿ:**

ಅನುದಾನದ ಲಭ್ಯತೆಗೆ ಅನುಗುಣವಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದು. ಗುರಿಯಲ್ಲಿ ಶೇ.90 ರಷ್ಟು ಸ್ಥಾನವನ್ನು ಸ್ನಾತಕೋತ್ತರ ಪದವಿಗಾಗಿ ಹಾಗೂ ಶೇ.10 ರಷ್ಟು ಸ್ಥಾನವನ್ನು ಪಿ.ಎಚ್.ಡಿ ಪದವಿಗೆ ಮೀಸಲಿಡುವುದು. ಸ್ನಾತಕೋತ್ತರ ಪದವಿ ಹಾಗೂ ಪಿ.ಎಚ್.ಡಿ ಪದವಿಗೆ ನಿಗದಿಪಡಿಸಿದ ಶೇಕಡವಾರು ಗುರಿಗೆ ಅನುಗುಣವಾಗಿ ಅಭ್ಯರ್ಥಿಗಳು ದೊರೆಯದಿದ್ದರೆ, ಪದವಿ ಹಾಗೂ ಪಿ.ಎಚ್ಡಿ ಕೊರ್ಸಿಗೆ ನಿಗದಿಪಡಿಸಿದ ಗುರಿಯನ್ನು ಅದಲು ಬದಲು ಮಾಡಿಕೊಳ್ಳಬಹುದು.

**ಅರ್ಜಿ ಆಹ್ವಾನ:–**

ಅ) ವರ್ಷದಲ್ಲಿ 2 ಬಾರಿ Spring and Fall Season ಗೆ ಅನುಕೂಲವಾಗುವಂತೆ ಅರ್ಜಿಯನ್ನು ಆಹ್ವಾನಿಸಬೇಕು, ಅರ್ಜಿ ಆಹ್ವಾನಿಸಿದ ಬಗ್ಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಹಾಗೂ ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಣೆಯನ್ನು ಹೊರಡಿಸುವುದು.

ಆ) ಮೊದಲ ಪ್ರಕಟಣೆಯಲ್ಲಿ ನಿಗಧಿಪಡಿಸಿದ ಗುರಿಗನುಗುಣವಾಗಿ ಅಭ್ಯರ್ಥಿಗಳ ಆಯ್ಕೆಯಾದರೆ ಎರಡನೇ ಅವಧಿಗೆ ಅರ್ಜಿ ಆಹ್ವಾನಿಸುವ ಅಗತ್ಯವಿರುವುದಿಲ್ಲ.

ಇ) ಅಭ್ಯರ್ಥಿಯು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ನಂತರ ಇಲಾಖೆಯು ನಿಗಧಿಪಡಿಸಿದ ದಿನಾಂಕದಂದು ದಾಖಲೆ ಪರಿಶೀಲನೆಗೆ ಹಾಜರಾಗಬೇಕು.

**ಆಯ್ಕೆಯ ಮಾನದಂಡ:-**

1. ಅಭ್ಯರ್ಥಿಯು ಕರ್ನಾಟಕದ ನಿವಾಸಿಯಾಗಿರಬೇಕು.
2. ಕರ್ನಾಟಕ ರಾಜ್ಯ ಸರ್ಕಾರ ಪ್ರಕಟಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು.
3. ಇಲಾಖೆಯಿಂದ ಕಾಲಕಾಲಕ್ಕೆ ಪ್ರಕಟಿಸಲಾದ ದೇಶ ಹಾಗೂ ವಿದೇಶಿ ವಿಶ್ವ ವಿದ್ಯಾಲಯ / ಸಂಸ್ಥೆಗಳಲ್ಲಿ ಅನ್ ಕಂಡೀಷನಲ್ ಆಫರ್ ಲೆಟರ್ (Un Conditional Offer Letter) ಪಡೆದವರು ಮಾತ್ರ ಸಹಾಯಧನಕ್ಕೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.
4. ಇಲಾಖೆಯಿಂದ ಕಾಲಕಾಲಕ್ಕೆ ಪ್ರಕಟಿಸಲಾದ ದೇಶ ಹಾಗೂ ವಿದೇಶಿ ವಿಶ್ವ ವಿದ್ಯಾಲಯ / ಸಂಸ್ಥೆಗಳಲ್ಲಿ ಕಂಡೀಷನಲ್ ಆಫರ್ ಲೆಟರ್ (Conditional Offer Letter) ಪಡೆದವರು ಸಹಾಯಧನಕ್ಕೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
5. ಅಭ್ಯರ್ಥಿಯು ಅರ್ಜಿ ಸಲ್ಲಿಸುವಾಗ ಚಾಲ್ತಿಯಲ್ಲಿರುವ ಜಾತಿ-ಆದಾಯ ಪ್ರಮಾಣ ಪತ್ರ, 2 ವರ್ಷದ ಐಟಿ ರಿಟರ್ನ್ಸ್ ಹಾಗೂ ಅಭ್ಯರ್ಥಿ/ಅಭ್ಯರ್ಥಿಯ ಪೋಷಕರು ಸರ್ಕಾರಿ/ಖಾಸಗಿ ನೌಕರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರೆ, ಧೃಢೀಕೃತ ವಾರ್ಷಿಕ ವೇತನದ ಪ್ರಮಾಣ ಪತ್ರ, ವಿಶ್ವವಿದ್ಯಾಲಯ ಆಫರ್ ಲೆಟರ್, ಪದವಿ, ಸ್ನಾತಕೋತ್ತರ ಪದವಿಯ ಎಲ್ಲಾ ಸೆಮಿಸ್ಟರ್ ಅಂಕಪಟ್ಟಿ ಸೇರಿದಂತೆ ಎಲ್ಲಾ ಮೂಲ ದಾಖಲೆಗಳನ್ನು ಹೊಂದಿರಬೇಕು.

**ಸಹಾಯಧನ ಬಿಡುಗಡೆ:-**

ಅ) ಅಭ್ಯರ್ಥಿಗಳು ವಿದೇಶಕ್ಕೆ ತೆರಳಿ ವಿದೇಶಿ ಬ್ಯಾಂಕ್ ಖಾತೆಯನ್ನು ತೆರೆದ ನಂತರ, ಇಲಾಖೆಯು ಕೇಳಬಹುದಾದ ಎಲ್ಲಾ ದಾಖಲೆಗಳನ್ನು ಒದಗಿಸಿದ ಮೇಲೆ ಅನುದಾನದ ಲಭ್ಯತೆಗೆ ಅನುಗುಣವಾಗಿ ಸಹಾಯ ಧನವನ್ನು ಅಭ್ಯರ್ಥಿಯ ವಿದೇಶಿ ಬ್ಯಾಂಕ್ ಖಾತೆಗೆ ಬಿಡುಗಡೆ ಮಾಡಲಾಗುವುದು.

ಆ) ಸಹಾಯ ಧನವನ್ನು ಸೆಮಿಸ್ಟರ್ ವಾರು ವರ್ಷದಲ್ಲಿ 2 ಬಾರಿ ಅಥವಾ ವಿಶ್ವ ವಿದ್ಯಾಲಯಗಳು ಕೇಳಬಹುದಾದ ಅವಧಿಗೆ ಅನುಗುಣವಾಗಿ ಕೋರ್ಸ್ ಶುಲ್ಕ ಬಿಡುಗಡೆ ಮಾಡುವುದು, ನಿರ್ವಹಣಾ ವೆಚ್ಚವನ್ನು ವರ್ಷದಲ್ಲಿ 02 ಬಾರಿ ಮಾತ್ರ ಬಿಡುಗಡೆ ಮಾಡಲಾಗುವುದು.

**ವಿದೇಶಿ ವಿಶ್ವ ವಿದ್ಯಾಲಯಗಳ ಸೇರ್ಪಡೆ: (QS world Ranking / US News ಆಧಾರದ ಮೇಲೆ)**

ಅ) ಇಲಾಖೆಯ ಕಾಲಕಾಲಕ್ಕೆ ದೇಶ ಹಾಗೂ ವಿಶ್ವ ವಿದ್ಯಾಲಯ ಪಟ್ಟಿಯನ್ನು ಪ್ರಕಟಿಸಬೇಕು. ಇಲಾಖೆಯ ಹೊರಡಿಸುವ ದೇಶ ಮತ್ತು ವಿಶ್ವವಿದ್ಯಾಲಯ/ ಸಂಸ್ಥೆಯಲ್ಲಿ ಮಾತ್ರ ಅಭ್ಯರ್ಥಿಯು ಪ್ರವೇಶ ಪಡೆಯಬೇಕು.

ಆ) ಅಂತಹ ಅಭ್ಯರ್ಥಿ ಮಾತ್ರ ಆಯ್ಕೆಗೆ ಅರ್ಹರಾಗುತ್ತಾರೆ. ದೇಶ ಹಾಗೂ ವಿಶ್ವವಿದ್ಯಾಲಯವನ್ನು ಕಾಲಕಾಲಕ್ಕೆ ಸೇರ್ಪಡೆ ಮಾಡುವ ಮತ್ತು ಬದಲಾಯಿಸುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ.

ಇ) ದೇಶ ಹಾಗೂ ವಿಶ್ವ ವಿದ್ಯಾಲಯವನ್ನು ಆಯ್ಕೆ ಮಾಡುವಾಗ ಪ್ರತಿ ವರ್ಷ QS world Ranking & US News ನಲ್ಲಿ ಪ್ರಕಟಿಸುವ ಗ್ಲೋಬಲ್ ರ್‍ಯಾಂಕಿಂಗ್ – 200 (Global Ranking) ರಲ್ಲಿ ಸ್ಥಾನ ಪಡೆದ ದೇಶ ಹಾಗೂ ವಿಶ್ವವಿದ್ಯಾಲಯ / ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳಬೇಕು.

**ಸಾಂಸ್ಥಿಕ ರಚನೆ:–** ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು. ಇವರು ಸದರಿ ಕೇಂದ್ರದ ಕಾರ್ಯನಿರ್ವಾಹಕ ಮುಖ್ಯಸ್ಥರು, ಇವರು ಕೇಂದ್ರದ ಎಲ್ಲ ಚಟುವಟಿಕೆಗಳನ್ನು ಪರಿವೀಕ್ಷಿಸುತ್ತಾರೆ.

ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

- ಮುಖ್ಯ ಆಡಳಿತಾಧಿಕಾರಿಗಳು – 1
- ಕಛೇರಿ ಅಧೀಕ್ಷಕರು – 1
- ಶೀಘ್ರಲಿಪಿಗಾರರು – 1
- ಪ್ರ.ದ.ಸ – 2
- ದ್ವಿ.ದ.ಸ – 1
- ಗ್ರಂಥಪಾಲಕರು – 1
- ವಾರ್ಡನ್ – 1
- ಜವಾನರು – 2
- ಅಡುಗೆಯವರು – 2
- ಅಡುಗೆ ಸಹಾಯಕರು – 1
- ರಾತ್ರಿ ಕಾವಲುಗಾರರು – 1

**(ii) ಅಧಿಕಾರಿಗಳು ಮತ್ತು ನೌಕರರ ಅಧಿಕಾರ ಮತ್ತು ಕರ್ತವ್ಯಗಳು:-**

ಅ) ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರ ಹುದ್ದೆಯ ಸಮಾನ ಸ್ಥಾನವನ್ನು ಮುಖ್ಯ ಆಡಳಿತಾಧಿಕಾರಿಗಳು ಹೊಂದಿರುತ್ತಾರೆ. ಇವರು ಆಡಳಿತ ನಿರ್ವಹಣೆಯ ಅಧಿಕಾರಿಗಳಾಗಿದ್ದು, ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಆಡಳಿತ ನಿರ್ವಹಣೆ ಹಾಗೂ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಸಿಬ್ಬಂದಿಯ ಮೇಲ್ವಿಚಾರಣೆ ಮಾಡುತ್ತಾರೆ. ಸರ್ಕಾರದಿಂದ ಬರಬೇಕಾದ ಅನುದಾನ ಮತ್ತು ಆಡಳಿತಾತ್ಮಕ ಮಂಜೂರಾತಿಗಾಗಿ, ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರಿಗೆ ವರದಿ ನೀಡುತ್ತಾರೆ. ಕೇಂದ್ರ ಲೋಕ ಸೇವಾ ಆಯೋಗ, ಕರ್ನಾಟಕ ಲೋಕ ಸೇವಾ ಆಯೋಗ ಮತ್ತು ಸರ್ಕಾರದ ಇತರ ಇಲಾಖೆಗಳು, ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿಗಾಗಿ ಹೊರಡಿಸುವ ಅಧಿಸೂಚನೆಗಳನ್ನು ಗಮನಿಸಿ ಆ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ ನೀಡುವುದು. ಈ ಕುರಿತು ಬೇರೆ ಬೇರೆ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಿ ಅಭ್ಯರ್ಥಿಗಳಿಂದ ತರಬೇತಿಗಾಗಿ ಆನ್-ಲೈನ್ ಮೂಲಕ ಅರ್ಜಿ ಆಹ್ವಾನಿಸಿ ಪ್ರವೇಶ ಪರೀಕ್ಷೆ ನಡೆಸಿ ಮೆರಿಟ್ ಆಧಾರದ ಮೇಲೆ ತರಬೇತಿಗೆ ನಿಯೋಜಿಸುವುದು, ಹಾಗೂ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ ಪರಿಶಿಷ್ಟ ಜಾತಿ ಅಭ್ಯರ್ಥಿಗಳನ್ನು ನರ್ಸಿಂಗ್ ಕೋರ್ಸ್, ಅರೆ ವೈದ್ಯಕೀಯ ಕೋರ್ಸ್, ನಿಫ್ಟ್, ಸಿಪೆಟ್ ಇತ್ಯಾದಿ ಸಂಸ್ಥೆಗಳ ಮೂಲಕ ನೀಡುವ ವಿವಿಧ ತರಬೇತಿ ಕಾರ್ಯಕ್ರಮಗಳು ಹಾಗೂ ವಿದೇಶಿ ವಿಶ್ವ ವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಧನಸಹಾಯ ನೀಡುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು. ಅಲ್ಲದೆ ಕಾಲಕಾಲಕ್ಕೆ ಆಯುಕ್ತರು ಸಮಾಜ ಕಲ್ಯಾಣ ಇಲಾಖೆ ರವರು ಸೂಚಿಸುವ ಕೆಲಸಗಳನ್ನು ನಿರ್ವಹಿಸುವುದು.

ಆ) ವ್ಯವಸ್ಥಾಪಕ / ಕಛೇರಿ ಅಧೀಕ್ಷಕರು: ಮುಖ್ಯ ಆಡಳಿತಾಧಿಕಾರಿಗಳ ಗೈರು ಹಾಜರಿಯಲ್ಲಿ ಕೇಂದ್ರದ ಒಟ್ಟಾರೆ ಆಡಳಿತ ವನ್ನು ನಿರ್ವಹಿಸುವ ಹೊಣೆ ಅವರದ್ದಾಗಿದ್ದು, ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ಕಛೇರಿಯ ಎಲ್ಲಾ ಸಿಬ್ಬಂದಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುತ್ತಾ ಕಛೇರಿ ಮೇಲ್ವಿಚಾರಣೆ ಬಗ್ಗೆ ಹೆಚ್ಚಿನ ಗಮನ ಹರಿಸುವುದು. ಮುಖ್ಯ ಆಡಳಿತಾಧಿಕಾರಿಗಳ ಮತ್ತು ಆಯುಕ್ತರು ಕಾಲಕಾಲಕ್ಕೆ ನಿಗದಿಪಡಿಸಿದ ಕರ್ತವ್ಯಗಳನ್ನು ಅವರು ಮಾಡಬೇಕಾಗುತ್ತದೆ.

ಇ) ಪ್ರಥಮ ದರ್ಜೆ / ದ್ವಿತೀಯ ದರ್ಜೆ ಸಹಾಯಕರು: ಕಡತಗಳ ನಿರ್ವಹಣೆ, ದಾಖಲೆಗಳ ನಿರ್ವಹಣೆ, ಸರಕಾರದ ಆದೇಶಗಳು, ಪತ್ರ ವ್ಯವಹಾರ, ಸಿಬ್ಬಂದಿ ವರ್ಗದ ವಿಷಯ ಮತ್ತು ಲೆಕ್ಕ ಪತ್ರಗಳ ನಿರ್ವಹಣೆ ಇವರದ್ದಾಗಿದೆ.
ಲೆಕ್ಕಪತ್ರ ಸಮಯದಲ್ಲಿ ಕಡತಗಳನ್ನು ಪರಿಶೋಧನೆಗಾಗಿ ಮಂಡಿಸುವುದು. ಮೇಲಿನ ಅಧಿಕಾರಿಗಳು ಸೂಚಿಸುವ ಕಾರ್ಯಗಳನ್ನು ನಿರ್ವಹಿಸುವುದು.

ಈ) ಶೀಘ್ರಲಿಪಿಗಾರರು: ಮುಖ್ಯ ಆಡಳಿತಾಧಿಕಾರಿಗಳು ಹೇಳಿದ ಟಿಪ್ಪಣಿಗಳನ್ನು ಬೆರಳಚ್ಚು ಮಾಡುವುದು ಹಾಗೂ ಅಧಿಕಾರಿಗಳು ಸೂಚಿಸುವ ಕಾರ್ಯಗಳನ್ನು ನಿರ್ವಹಿಸುವುದು.

ಉ) ವಾರ್ಡನ್: ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ವಸತಿ ನಿಲಯದ ಮೇಲ್ವಿಚಾರಣೆ ಹಾಗೂ ಅಧಿಕಾರಿಗಳು ಸೂಚಿಸುವ ಕಾರ್ಯಗಳನ್ನು ನಿರ್ವಹಿಸುವುದು.

ಊ) ಗ್ರೂಪ್ ಡಿ ನೌಕರರು ಕೇಂದ್ರ ಕಛೇರಿಗೆ ಟಪ್ಪಾಲು ತೆಗೆದುಕೊಂಡು ಹೋಗುವುದು, ಕಡತಗಳನ್ನು ವಿತರಿಸುವುದು, ಹಾಗೂ ಅಧಿಕಾರಿಗಳು ಸೂಚಿಸುವ ಕಾರ್ಯಗಳನ್ನು ನಿರ್ವಹಿಸುವುದು ಮತ್ತು ಸಿಬ್ಬಂದಿಗಳಿಗೆ ಸಹಾಯ ಮಾಡುವುದು.

**(iii) ಅಧಿಕಾರಿಗಳ ಮತ್ತು ನೌಕರರ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು-**

ಪರೀಕ್ಷಾ ಪೂರ್ವ ತರಬೇತಿ ಕೇಂದ್ರದಲ್ಲಿ ಈ ಕೆಳಗಿನಂತೆ ಪ್ರಕಿಯೆಗಳನ್ನು ಅನುಸರಿಸಲಾಗುತ್ತದೆ.

**ಪ್ರ.ದ.ಸ.** :- ಸದರಿ ಕೇಂದ್ರಕ್ಕೆ ಬರುವ ಪತ್ರಗಳನ್ನು/ಅರ್ಜಿಗಳನ್ನು ಸ್ವೀಕರಿಸಿ ಸಂಬಂಧಪಟ್ಟವರಿಗೆ ವಿಂಗಡಿಸಿ ಮುಂದಿನ ಕ್ರಮಕ್ಕಾಗಿ ಮಂಡಿಸುವುದು.

**ಕಛೇರಿ ಅಧೀಕ್ಷಕರು** :- ಕಡತಗಳನ್ನು ಪರಿಶೀಲಿಸಿ, ಮುಖ್ಯ ಆಡಳಿತಾಧಿಕಾರಿಗಳ ಅನುಮೋದನೆ ಅಥವಾ ಮುಂದಿನ ಆದೇಶಕ್ಕಾಗಿ ಮಂಡಿಸುತ್ತಾರೆ.

ಮುಖ್ಯ ಆಡಳಿತಾಧಿಕಾರಿಗಳು:- ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಎಲ್ಲ ದಿನನಿತ್ಯದ ವ್ಯವಹಾರಗಳಲ್ಲಿ ನಿರ್ಣಯ ಕೈಗೊಳ್ಳುತ್ತಾರೆ. ಆದರೆ ನೀತಿ ನಿರ್ವಹಣೆಯ ಸಂದರ್ಭದಲ್ಲಿ ಮತ್ತು ಇತರ ವಿಷಯಗಳಲ್ಲಿ ಕಡತಗಳನ್ನು ಆಯುಕ್ತರ ಅನುಮೋದನೆ ಮತ್ತು ಸಮ್ಮತಿಗಾಗಿ ಮಂಡಿಸುತ್ತಾರೆ. ಸರ್ಕಾರಕ್ಕೆ ಸಲ್ಲಿಸಬೇಕಾದ ಎಲ್ಲ ಪ್ರಸ್ತಾವನೆಗಳನ್ನು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಮುಖಾಂತರವೇ ಸಲ್ಲಿಸುತ್ತಾರೆ.

**(iv) ಕಾರ್ಯಗಳ ನಿರ್ವಹಣೆಗೆ ರೂಪಿಸಿರುವ ಸೂತ್ರಗಳು-**

ಸಮಾಜ ಕಲ್ಯಾಣ ಇಲಾಖೆಯ ಕೈಪಿಡಿ, ಮತ್ತು ಸರ್ಕಾರದ ಆದೇಶಗಳ ಮೇರೆಗೆ ಕಾಲಕಾಲಕ್ಕೆ ನಿಗದಿ ಪಡಿಸಿದ ನಿಯಮಗಳ ಅನುಸಾರವಾಗಿ ಮುಖ್ಯ ಆಡಳಿತಾಧಿಕಾರಿಗಳು ಮತ್ತು ಎಲ್ಲ ಸಿಬ್ಬಂದಿ ವರ್ಗದವರು ಕಡ್ಡಾಯವಾಗಿ ನಿಯಮಗಳನ್ನು ಪಾಲಿಸುತ್ತಾರೆ. ಸರ್ಕಾರ ನಿರ್ದಿಷ್ಟ ಪಡಿಸಿದ ಮಾರ್ಗದರ್ಶನ ಸೂತ್ರಗಳ

ಮೇರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸಲಾಗುತ್ತದೆ.

**(v) ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಹೊಂದಿರುವ ಅಥವಾ ನಿಯಂತ್ರಣದಲ್ಲಿರುವ ಅಥವಾ ಉದ್ಯೋಗಿಗಳು ಬಳಸುವ ನಿಯಮಗಳನ್ನು, ವಿನಿಮಯಗಳನ್ನು, ಸೂಚನೆಗಳನ್ನು ಕೈಪಿಡಿಗಳನ್ನು ಮತ್ತು ದಾಖಲೆಗಳು:–**

ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮುಖ್ಯ ಆಡಳಿತಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಸಮಾಜ ಕಲ್ಯಾಣ ಇಲಾಖೆಯಿಂದ ಬಂದ ಸರ್ಕಾರದ ಆದೇಶಗಳನ್ನು ಪಾಲಿಸುವುದು, ಅಲ್ಲದೆ ಸಮಾಜ ಕಲ್ಯಾಣ ಇಲಾಖೆಯ ಕೈಪಿಡಿಯ ನಿಯಮಗಳು, ಕರ್ನಾಟಕ ನಾಗರಿಕ ಸೇವಾ ನಿಯಮಗಳನ್ನು ಪಾಲಿಸುವುದು.

**(vi) ಹೊಂದಿರುವ ಅಥವಾ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರ ಪಟ್ಟಿಕೆ:–**

ಕಾಲಕಾಲಕ್ಕೆ ಸರ್ಕಾರ ಹೊರಡಿಸುವ ಮಾರ್ಗಸೂಚಿಗಳು ಮತ್ತು ಸುತ್ತೋಲೆಗಳನ್ನು ಹಾಗೂ ಆದೇಶಗಳನ್ನು ಸಂರಕ್ಷಿಸಲಾಗುತ್ತಿದೆ.

**(vii) ಕಾರ್ಯನೀತಿಯನ್ನು ರೂಪಿಸುವುದು ಅಥವಾ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂತೆ ಯಾವುದೇ ವ್ಯವಸ್ಥೆಗಳ ವಿವರಗಳು–**

ಇಂಥಹ ಯಾವುದೇ ವ್ಯವಸ್ಥೆ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದಲ್ಲಿ ಇರುವುದಿಲ್ಲ. ಆದಾಗ್ಯೂ ಈ ಕೇಂದ್ರದಿಂದ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರು ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿದಲ್ಲಿ ಅಂತಹ ಸಲಹೆಗಳನ್ನು ಕಾರ್ಯಕ್ರಮ ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಸರ್ಕಾರದ ಅನುಮತಿ ಪಡೆದು ಕಾರ್ಯಕ್ರಮದಲ್ಲಿ ಅಳವಡಿಸಿಕೊಳ್ಳಲಾಗುವುದು.

**(viii) ಮಂಡಳಿಗಳ, ಪರಿಷತ್ತುಗಳ, ಸಮಿತಿಗಳ ಮತ್ತು ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಭಾಗವಾಗಿ ಅಥವಾ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇತರ ನಿಕಾಯಗಳ ಹೇಳಿಕೆ ಮತ್ತು ಆ ಮಂಡಳಿಗಳ, ಪರಿಷತ್ತುಗಳ ಸಮಿತಿಗಳ ಮತ್ತು ಇತರ ನಿಕಾಯಗಳ ಸಭೆಗಳ ನಡವಳಿಗಳು ಸಾರ್ವಜನಿಕರಿಗೆ ದೊರೆಯುತ್ತಿವೆಯೇ;**

ಅನ್ವಯಿಸುವುದಿಲ್ಲ

**(ix) ಅಧಿಕಾರಿಗಳ ಮತ್ತು ನೌಕರರ ವಿವರ ಸೂಚಿ ಪುಸ್ತಕ:–**

| ಕ್ರ.ಸಂ | ಅಧಿಕಾರಿ/ನೌಕರರ ಹೆಸರು | ಹುದ್ದೆ | ಕಛೇರಿ ವಿಳಾಸ |
|---|---|---|---|
| 1. | ಶ್ರೀ. ಮಹೇಶ್ | ಮುಖ್ಯ ಆಡಳಿತಾಧಿಕಾರಿಗಳು | ಪರೀಕ್ಷಾ ಪೂರ್ವ ತರಬೇತಿ ಕೇಂದ್ರ, ಡಾ॥. ಬಿ.ಆರ್ ಅಂಬೇಡ್ಕರ್ ಭವನ, ವಸಂತನಗರ, ಮಿಲ್ಲರ್ಸ್ ರಸ್ತೆ, ಬೆಂಗಳೂರು – 560052<br>ದೂರವಾಣಿ ಸಂಖ್ಯೆ: 080–22207784<br>ವೆಬ್ ಸೈಟ್ ವಿಳಾಸ: **www.sw.kar.nic.in**<br>ಇ–ಮೇಲ್: **swdpetc2011@gmail.com** |
| 2. | ಶ್ರೀ. ರವಿ ಕುಮಾರ್ ಎಂ. ಆರ್ | ಕಛೇರಿ ಅಧೀಕ್ಷಕರು | |
| 3. | ಶ್ರೀ. ಸತೀಶ್ | ಪ್ರ.ದ.ಸ | |
| 4. | ಶ್ರೀಮತಿ. ಭಾರತಿ ಜೆ | ಶೀಘ್ರಲಿಪಿಗಾರರು (ನಿ–32) | |
| 5. | ಶ್ರೀಮತಿ. ಮಂಜುವಾಣಿ ಕೆ | ವಾರ್ಡನ್ | |
| 6. | ಶ್ರೀಮತಿ. ಸುಜಾತಮ್ಮ ಜಿ.ಎನ್ | ದ್ವಿತೀಯ ದರ್ಜೆ ಸಹಾಯಕರು | |
| 7. | ಶ್ರೀ. ವಿಜಯಕುಮಾರ | ಜವಾನರು | |

**(x)** ವಿನಿಯಮನಗಳಲ್ಲಿ ಉಪಬಂಧಿಸಿರುವಂತೆ ಪರಿಹಾರದ ವ್ಯವಸ್ಥೆಯೂ ಸೇರಿದಂತೆ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುವ ಮಾಸಿಕ ಸಂಭಾವನೆಯನ್ನು:–

| ಕ್ರ.ಸಂ | ಅಧಿಕಾರಿ/ನೌಕರರ ಹೆಸರು | ಹುದ್ದೆ | ಮಾಸಿಕ ವೇತನ (ಒಟ್ಟು ಮೊತ್ತ ರೂ. ಗಳಲ್ಲಿ) |
|---|---|---|---|
| 1. | ಶ್ರೀ. ಮಹೇಶ್ | ಮುಖ್ಯ ಆಡಳಿತಾಧಿಕಾರಿಗಳು | 91,961/- |
| 2. | ಶ್ರೀ. ರವಿ ಕುಮಾರ್ ಎಂ. ಆರ್ | ಕಛೇರಿ ಅಧೀಕ್ಷಕರು | 51,960/- |
| 3. | ಶ್ರೀ. ಸತೀಶ್ | ಪ್ರ.ದ.ಸ | 39,734/- |
| 4. | ಶ್ರೀಮತಿ. ಭಾರತಿ ಜೆ | ಶೀಘ್ರಲಿಪಿಗಾರರು (ನಿ–32) | 50,239/- |
| 5. | ಶ್ರೀಮತಿ. ಮಂಜುವಾಣಿ ಕೆ | ವಾರ್ಡನ್ | 44,792/- |
| 6. | ಶ್ರೀಮತಿ. ಸುಜಾತಮ್ಮ ಜಿ.ಎನ್ | ದ್ವಿತೀಯ ದರ್ಜೆ ಸಹಾಯಕರು | 39,255/- |
| 7. | ಶ್ರೀ. ವಿಜಯಕುಮಾರ | ಜವಾನರು | 39,734/- |

**(xi)** ಎಲ್ಲಾ ಯೋಜನೆಗಳ ಪ್ರಸ್ತಾವಿತ ವೆಚ್ಚಗಳ ವಿವರಗಳನ್ನು ಸೂಚಿಸಿ ಪ್ರತಿಯೊಂದು ಏಜನ್ಸಿ ಹಂಚಿಕೆ ಮಾಡಲಾದ ಆಯವ್ಯಯ ಪತ್ರವನ್ನು ಮತ್ತು ಮಾಡಲಾದ ಬಟವಾಡೆಗಳ ವರದಿಗಳನ್ನು:-

**2019-20 & 2020-21 ನೇ ಸಾಲಿನಲ್ಲಿ ಪರೀಕ್ಷಾ ಪೂರ್ವ ತರಬೇತಿ ಕೇಂದ್ರಕ್ಕೆ ಬಿಡುಗಡೆಯಾದ ಅನುದಾನದ ವಿವರ**

(ರೂ. ಲಕ್ಷಗಳಲ್ಲಿ)

| ಕಾರ್ಯಕ್ರಮದ ವಿವರ ಹಾಗೂ ಲೆಕ್ಕ ಶೀರ್ಷಿಕೆ | ನಿಗಧಿಯಾದ ಅನುದಾನ | ಬಿಡುಗಡೆಯಾದ ಅನುದಾನ | ಖರ್ಚಾದ ಅನುದಾನ | ಭೌತಿಕ ಸಾಧನೆ | | ಷರಾ |
|---|---|---|---|---|---|---|
| | | | | ಗುರಿ | ಸಾಧನೆ | |
| ತರಬೇತಿ ಮತ್ತು ಸಂಬಂಧಿತ ವೆಚ್ಚಗಳು<br>2225-01-277-0-02 (ಯೋಜನೇತರ) ರಾಜ್ಯವಲಯ - | | | | | | |
| 2019-20 | 2484.03 | 2484.03 | 2484.03 | 2750 | 2696 | 2019-20 ನೇ ಸಾಲಿನ ತರಬೇತಿ ಪಡೆಯುತ್ತಿದ್ದ ಅಭ್ಯರ್ಥಿಗಳಿಗೆ ಶಿಷ್ಯವೇತನ ಹಾಗೂ ತರಬೇತಿ ಸಂಸ್ಥೆಗಳಿಗೆ ತರಬೇತಿ ಶುಲ್ಕವನ್ನು ಪಾವತಿಸಿದ ವೆಚ್ಚ.<br>ಹಾಗೂ ಪ.ಪೂ.ತ.ಕೇಂ. ಕಛೇರಿಯ ಅಧಿಕಾರಿ/ಸಿಬ್ಬಂದಿಗಳಿಗೆ ವೇತನವನ್ನು ಪಾವತಿಸಿದ ವೆಚ್ಚ. |
| 2020-21 | 2435 | 470.27 | 448.58 | 07 | 07 | |
| "ಪ್ರಬುದ್ಧ" - ವಿದೇಶಿ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗಕ್ಕೆ ಧನ ಸಹಾಯ:<br>2225-01-796-0-02 (ವಿಶೇಷ ಅಭಿವೃದ್ಧಿ ಯೋಜನೆ) | | | | | | |
| 2019-20 | 2300.00 | 2300.00 | 1300.00 | 50 | 48 | 2019-20 ನೇ ಸಾಲಿನಲ್ಲಿ ಉಳಿಕೆಯಾದ ಅನುದಾನವನ್ನು 2020-21 ನೇ ಸಾಲಿನಲ್ಲಿ ಉಪಯೋಗಿಸಿಕೊಳ್ಳಲಾಗಿದೆ. |
| 2020-21 | 1000.00 | 1000.00 | 1000.00 | 50 | 45 | |

**(xii)** ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು, ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನ ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳು:-

ವಿದೇಶಿ ವಿಶ್ವ ವಿದ್ಯಾಲಯದಲ್ಲಿ ಉನ್ನತ ವ್ಯಾಸಂಗಕ್ಕೆ ಆಯ್ಕೆಯಾಗುವ ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ಧನಸಹಾಯ ನೀಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದ್ದು, ಸಹಾಯಧನ ನೀಡುವ ಯಾವುದೇ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿಲ್ಲ.

**(xiii) ನೀಡಿರುವ ರಿಯಾಯಿತಿಗಳನ್ನು, ಅನುಮತಿ ಪತ್ರಗಳನ್ನು ಅಥವಾ ಅಧಿಕಾರಪತ್ರಗಳನ್ನು ಪಡೆಯುವವರ ವಿವರಗಳು:–**

ಪರೀಕ್ಷಾ ಪೂರ್ವ ತರಬೇತಿ ಕೇಂದ್ರದಿಂದ ಯಾವುದೇ ರಿಯಾಯಿತಿಗಳನ್ನು, ಅನುಮತಿ ಪತ್ರಗಳನ್ನು ಅಥವಾ ಅಧಿಕಾರಪತ್ರಗಳನ್ನು ನೀಡುವ ಕಾರ್ಯಕ್ರಮ ಇರುವುದಿಲ್ಲ.

**(xiv) ಲಭ್ಯವಾಗುವ ಅಥವಾ ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ ಮಾಹಿತಿಗೆ ಸಂಬಂಧಿಸಿದ ವಿವರಗಳು:–**

ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್ ವಿಳಾಸ www.sw.kar.nic.in. ನಲ್ಲಿ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಕಾರ್ಯಕ್ರಮಗಳ ವಿವರಗಳನ್ನು ಅಳವಡಿಸಲಾಗಿದೆ.

**(xv) ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದರೆ ಅದರ ಕೆಲಸದ ಸಮಯವನ್ನು ಒಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು:–**

ಡಾ॥ ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಗ್ರಂಥಾಲಯವನ್ನು 14.04.2002 ರಂದು ಪ್ರಾರಂಭಿಸಲಾಗಿದ್ದು, ವಿವಿದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಭ್ಯಾಸ ಮಾಡುವ ವಿದ್ಯಾರ್ಥಿಗಳ ಹಿತ ದೃಷ್ಠಿಯಿಂದ ಈ ಗ್ರಂಥಾಲಯವನ್ನು ಸ್ಥಾಪಿಸಲಾಗಿದೆ. ಸದರಿ ಗ್ರಂಥಾಲಯವು ಬೆಳಿಗ್ಗೆ 08.00 ರಿಂದ ರಾತ್ರಿ 9.00 ಗಂಟೆವರೆಗೆ ತೆರೆದಿರುತ್ತದೆ.

**(xvi) ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರೆ ವಿವರಗಳು:–**

| | | |
|---|---|---|
| 1. | ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಮುಖ್ಯ ಆಡಳಿತಾಧಿಕಾರಿಗಳು, ಪರೀಕ್ಷಾ ಪೂರ್ವ ತರಬೇತಿ ಕೇಂದ್ರ | ಶ್ರೀ. ಮಹೇಶ್ |
| 2. | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಕಛೇರಿ ಅಧೀಕ್ಷಕರು, ಪರೀಕ್ಷಾ ಪೂರ್ವ ತರಬೇತಿ ಕೇಂದ್ರ | ಶ್ರೀ. ರವಿಕುಮಾರ್ ಎಂ.ಆರ್. |
| 3. | ಮೇಲ್ಮನವಿ ಪ್ರಾಧಿಕಾರ ಮತ್ತು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ | ಶ್ರೀ. ಡಾ. ರವಿಕುಮಾರ್ ಸುರಪುರ, ಭಾ.ಆ.ಸೇ |

*******